

ಕಾಂಗ್ರೆಸ್ ಎನ್.ಡಿ.ಎ.ನೇರ ಸ್ಪರ್ಧೆ: ಭಿನ್ನಮತಕ್ಕೆ ವರಿಷ್ಠರು ತಳಮಳ

ಕೋಲಾರ,ಏ,11–ಕೋಲಾರ ಲೋಕಸಭಾ ಮೀಸಲು ಕ್ಷೇತ್ರದ ಚುನಾವಣೆಯಲ್ಲಿ ಅಂತಮವಾಗಿ ಕಣದಲ್ಲಿ 18 ಮಂದಿ ಉಳಿದ್ದಿದ್ದರೂ ಬಹುತೇಕ ಎನ್.ಡಿ.ಎ. ಮತ್ತು ಕಾಂಗ್ರೇಸ್ ಅಭ್ಯರ್ಥಿಗಳ ನಡುವೆ ನೇರ ಸ್ಪರ್ಧೆ ಏರ್ಪಡಲಿದೆ. ಉಳಿದ 16 ಮಂದಿ ಚುನಾವಣೆಯಲ್ಲಿ ಆಟಕ್ಕೊಂಡು ಲೆಕ್ಕಕ್ಕಿಲ್ಲ ಎಂಬಂತಾಗಿದ್ದು ಠೇವಣೆ ಪಡೆಯುವುದು ಅಸಾಧ್ಯವಾಗಿದೆ.

ಈ ಚುನಾವಣೆಯಲ್ಲಿ ಬಿಜೆಪಿ ಮತ್ತು ಜೆ.ಡಿ.ಎಸ್. ಪಕ್ಷವು ಮೈತ್ರಿಯಾಗಿರುವ ಹಿನ್ನಲೆಯಲ್ಲಿ ಕಾಂಗ್ರೇಸ್ ಪಕ್ಷವು ಭಾರಿ ಪೈಪೋಟಿಯನ್ನು ಎದುರಿಸ ಬೇಕಾಗಿದೆ. ಇದರ ನಡುವೆ ಭಿನ್ನಮತ ರಾಗಗಳಿಗೆ ಪಕ್ಷಗಳ ಹೈಕಮಾಂಡ್‌ಗಳು ಕಳವಳದಿಂದ ತತ್ತರಿಸುತ್ತಿವೆ.

ಲೋಕಸಭಾ ಕ್ಷೇತ್ರದ 8 ವಿಧಾನ ಸಭಾ ಕ್ಷೇತ್ರಗಳ ಪೈಕಿ ಮೂರು ಕ್ಷೇತ್ರದಲ್ಲಿ ಜೆ.ಡಿ.ಎಸ್. ಪಕ್ಷದ ಶಾಸಕರು ಆಯ್ಕೆಯಾಗಿದ್ದರೆ ಉಳಿದ 5 ಕ್ಷೇತ್ರದಲ್ಲಿ ಕಾಂಗ್ರೇಸ್ ಪಕ್ಷದ ಶಾಸಕರು ಆಯ್ಕೆಯಾಗಿದ್ದಾರೆ. ವಿಧಾನ ಪರಿಷತ್ ಸದಸ್ಯರ ಮೈತ್ರಿ ಕಡೆ 2 ಹಾಗೂ ಕಾಂಗ್ರೇಸ್ ಪಕ್ಷದ ಕಡೆ 2 ಸದಸ್ಯರು ಈ ಚುನಾವಣೆಯ ಪ್ರಚಾರದಲ್ಲಿ ತೊಡಗಿಸಿಕೊಳ್ಳಲಿದ್ದಾರೆ.

ಜಿಲ್ಲೆಯ ಶ್ರೀನಿವಾಸಪುರ, ಮುಳಬಾಗಿಲು, ಕೆ.ಜಿ.ಎಫ್. ಬಂಗಾರಪೇಟೆ, ಕೋಲಾರ ಹಾಗೂ ಮಾಲೂರು ಸೇರಿದಂತೆ 6 ವಿಧಾನ ಸಭಾ ಕ್ಷೇತ್ರದಲ್ಲಿ 12,78,183 ಮತದಾರರು ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ಮತ್ತು ಶಿಡ್ಲಘಟ್ಟ ಸೇರಿದಂತೆ 2 ವಿಧಾನ ಸಭಾ ಸೇರಿದಂತೆ ಒಟ್ಟು 4.30 ಲಕ್ಷ ಮತದಾರರು ಸೇರಿದಂತೆ ಈ ಭಾರಿ ಸುಮಾರು 17.08 ಲಕ್ಷಕ್ಕೂ ಹೆಚ್ಚು ಮತದಾರರು ತಮ್ಮ ಮತ ಚಲಾಯಿಸಲು ಅರ್ಹತೆ ಹೊಂದಿದ್ದಾರೆ.

ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಯ ಬಲಗೈ ಸಮುದಾಯದವರು ಶೇ 18.73 (3.20ಲಕ್ಷ) ವಕ್ಕಲಿಗ ಸಮುದಾಯದವರು ಶೇ 17.26 (2.95 ಲಕ್ಷ) ಅಲ್ಪಸಂಖ್ಯಾತರಾದ ಮುಸ್ಲಿಂ ಸಮಾಜ ಶೇ 15.23 (2.60 ಲಕ್ಷ) ಪ್ರಮುಖವಾದ ಪಾತ್ರ ವಹಿಸಲಿದ್ದಾರೆ.

ಉಳಿದಂತೆ ನಂತರದಲ್ಲಿ ಬರುವ ಕುರುಬರು ಶೇ,7.02, ಪ.ಪಂ.ಶೇ,6.4 ಪರಿಶಿಷ್ಟ ಜಾತಿ ಎಡಗೈ ಶೇ 5.56, ಬೋವಿ ಶೇ,5.27 ಬಲಿಜಗರು ಶೇ 3.51, ಯಾದವರು ಶೇ,3.04 ರಷ್ಟು ಉಳಿದಂತೆ ಬರಲಿರುವ ಎಲ್ಲಾ ಸಮುದಾಯಗಳು ಶೇ 3 ಒಳಗೆ ಇರುವರು ಎಂದು ಅಂದಾಜಿಸಲಾಗಿದೆ.

ಪ್ರಮುಖವಾಗಿ ಕಾಂಗ್ರೇಸ್ ಪಕ್ಷದಲ್ಲಿ ಕೆ.ಹೆಚ್.ಮುನಿಯಪ್ಪ ಅವರ ಅಳಿಯ ಚಿಕ್ಕಪೆದ್ದನ್ನ ಅವರಿಗೆ ಟಿಕೆಟ್ ತಪ್ಪಿರುವುದಕ್ಕೆ ಕೆ.ಹೆಚ್.ಮುನಿಯಪ್ಪ ಬೆಂಬಲಿಗರು ಹಾಗು ಕೆ.ಜಿ.ಎಫ್. ಕ್ಷೇತ್ರದ ಶಾಸಕಿ ರೂಪಕಲಾ ಅವರು ಕಾಂಗ್ರೇಸ್ ಅಧಿಕೃತ ಅಭ್ಯರ್ಥಿ ಕೆ.ವಿ.ಗೌತಮ್ ಅವರಿಗೆ ಸಂಪೂರ್ಣ ಬೆಂಬಲ ಸಿಗಲಿದೆಯೇ ಎಂಬುವುದು ಕಾದು ನೋಡ ಬೇಕಾಗಿದೆ.

ಬಿಜೆಪಿ ಮತ್ತು ಜೆ.ಡಿ.ಎಸ್. ಎರಡು ಪಕ್ಷಗಳ ಮುಖಂಡರುಗಳು ಒಂದಾಗಿದ್ದರೂ ಸಹ ಕಾರ್ಯಕರ್ತರು ಒಂದಾಗುವುದು ಸುಲಭವಾಗಿಲ್ಲ. ಹಲವಾರು ಚುನಾವಣೆಗಳಲ್ಲಿನ ವೈಮನಸ್ಸುಗಳು ಅಷ್ಟು ಬೇಗ ಮರೆಯಲಾರರು ಮೈತ್ರಿ ಸುಧಾರಣೆಯಾಗಲು ಸಮನ್ವಯ ಸಮಿತಿಯ ಸಭೆಗಳು ಪರಿಣಾಮಕಾರಿಯಾಗುವಂತೆ ಅಯೋಜಿಸ ಬೇಕಾಗಿದೆ

ಒಟ್ಟಾರೆಯಾಗಿ ಚುನಾವಣೆಯ ಮತದಾನಕ್ಕೆ ಇನ್ನು 15 ದಿನಗಳ ಮಾತ್ರ ಬಾಕಿ ಉಳಿದಿದ್ದು ಅದರೊಳಗೆ ಏನೇನು ಬದಲಾವಣೆ ಅಗಲಿದೆ ಎಂಬುವುದನ್ನು ಕಾದು ನೋಡ ಬೇಕಾಗಿದೆ.

ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಶೋಭಾ ಕರಂದ್ಲಾಜೆ ಅವರು ಕೆ.ಆರ್.ಪುರದ ವಿವಿಧೆಡೆ ಪ್ರಚಾರ ಮಾಡಿದರು. ಶಾಸಕ ಬೈರತಿ ಬಸವರಾಜ, ಮುಖಂಡರಾದ ಗಣೇಶ್ ರೆಡ್ಡಿ, ಸತೀಶ್ ಇದ್ದರು.

ಬರಕ್ಕಿಂತ ಅಧಿಕಾರಕ್ಕೆ ಪೈಪೋಟಿ: ಕುರುಬೂರು ಕಿಡಿ

(ಸಂಜೀವಾಣಿ ವಾರ್ತೆ)

ದಾವಣಗೆರೆ. ಏ.11; ಬರಗಾಲದಿಂದ ತತ್ತರಿಸಿರುವ ರೈತರ ಸಂಕಷ್ಟ ಆಲಿಸುವುದನ್ನು ಬಿಟ್ಟು ಜನಪ್ರತಿನಿಧಿಗಳು ಅಧಿಕಾರ ಹಿಡಿಯಲು ಪೈಪೋಟಿ ನಡೆಸುತ್ತಿದ್ದಾರೆ ರಾಜಕೀಯ ಕ್ಷೇತ್ರ ವ್ಯಾಪಾರಕ್ಕಿಂತಲೂ ಹೆಚ್ಚು ಲಾಭಗಳಿಸುವ ಕ್ಷೇತ್ರವಾಗಿದೆ ಎಂದು ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ರೈತರ ಬರದ ಸಂಕಷ್ಟ ಕಾಲದಲ್ಲಿ ಜಗಳವಾಡುತ್ತಾ ಮನರಂಜನೆ ನಿಡುತ್ತಿದ್ದಾರೆ. ಇದರಿಂದ ರೈತರ ಹೊಟ್ಟೆ ತುಂಬುವುದಿಲ್ಲ ಈ ನಾಟಕ ಬಿಡಿ .ಪರಿಹಾರ ನೀಡಿ. ಇಲ್ಲವೇ ಮತ ಕೇಳಲು ಬರಬೇಡಿ ಎಂದು ಮತ ಕೇಳಲು ಬರುವ ಅಭ್ಯರ್ಥಿಗಳನ್ನು ಊರಿಂದ ಹೊರಗಿಡಿ ಎಂದು ಕರೆ ನೀಡಿದರು. ಬರಗಾಲದಿಂದ ತತ್ತರಿಸಿರುವ ರೈತರ ಸಂಕಷ್ಟ ಆಲಿಸಲು ಯಾರು ಇಲ್ಲವಾಗಿದ್ದಾರೆ ರಾಜ್ಯದಲ್ಲಿ ಕುಡಿಯುವ ನೀರು ದನಕರುಗಳಿಗೆ ಮೇವು ಸಿಗದಂತಾಗಿದೆ ಅಧಿಕಾರಿಗಳು ಚುನಾವಣೆ ಕಾರಣ ಹೇಳಿ ರೈತರನ್ನು ನಿರ್ಲಕ್ಷ್ಯ ಮಾಡಿದ್ದಾರೆ . ರಾಜಕೀಯ ಪಕ್ಷದ ಮುಖಂಡರು ಅಧಿಕಾರ ಹಿಡಿಯುವ ಹುಚ್ಚಿನಲ್ಲಿ ತೇಲಾಡುತ್ತಿದ್ದಾರೆ.ಬರಗಾಲದ ನೀರಿನ ಸಮಸ್ಯೆಯಿಂದ ರೈತರ ಬೆಳೆಗಳು ಒಣಗುತ್ತಿವೆ ಕೊಳವೆ ಬಾವಿಗಳಲ್ಲಿ ನೀರು ಹಿಂಗುತ್ತಿವೆ. ಕೃಷಿ ಕ್ಷೇತ್ರ ದುರ್ಬಲವಾಗುತ್ತಿದೆ ಇದು ರಾಜಕೀಯ ಪಕ್ಷಗಳಿಗೆ ಕಾಣುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು .ರೈತರು ಎಚ್ಚೆತ್ತು–ಕೊಂಡು ಸ್ವಾಭಿಮಾನದಿಂದ ಹಳ್ಳಿಗಳಲ್ಲಿ ಗುಡಿ ಗೋಪುರ ಕಟ್ಟುವ ಚಿಂತನೆ ಮಾಡುವ ಬದಲು ಕೆರೆ ಕಟ್ಟೆಗಳ ಹೂಳೆತ್ತುವ ಮೂಲಕ ಪುನಶ್ಚೇತನಗೊಳಿಸುವ ಹಾಗೂ ಹೊಸದಾಗಿ ಕೆರೆಕಟ್ಟೆ ನಿರ್ಮಿಸುವ ಕೆಲಸದಲ್ಲಿ ಶ್ರದ್ದೆ ವಹಿಸಿದರೆ ಮುಂದಿನ ತಲೆಮಾರಿಗೆ ಕೊಳವೆ ಬಾವಿಗಳಲ್ಲಿ ನೀರು ಶೇಖರಣೆಯಾಗಿ ಕೃಷಿ ಕ್ಷೇತ್ರ ಸಮೃದ್ಧಿಯಾಗಲು ಸಹಕಾರಿಯಾಗುತ್ತದೆ ಎಂದರು. ಬರಗಾಲದ ಬವಣೆಯಿಂದ ರೈತರಿಗೆ ಕುಡಿಯುವ ನೀರು ದನಕರುಗಳಿಗೆ ಮೇವು ಸಿಗುತ್ತಿಲ್ಲ. ರಾಜ್ಯಾದ್ಯಂತ 78 ಸಕ್ಕರೆ ಕಾರ್ಖಾನೆಗಳು 5 ಕೋಟಿ 80 ಲಕ್ಷ ಕಬ್ಬು ನುರಿಸಿವೆ ಸುಮಾರು 2600ಕೋಟಿ ಕಬ್ಬಿನ ಬಾಕಿ ಹಣವನ್ನು ರೈತರಿಗೆ ಪಾವತಿಸಿಲ್ಲ ಕಬ್ಬು ಹಾಗೂ ಸಕ್ಕರೆ ಅಭಿವೃದ್ಧಿ ಆಯುಕ್ತರು ಈ ಕೂಡಲೇ ಕಾನೂನು ಕ್ರಮ ಕೈಗೊಂಡು ಶೇಕಡ 15 ಬಡ್ಡಿ ಸೇರಿಸಿ ಹಣ ಕೊಡಿಸಲು ಕ್ರಮ ಕೈಗೊಳ್ಳಬೇಕು ಎಂದರು.ರಾಜ್ಯದಲ್ಲಿ ಸುಮಾರು 10 ಲಕ್ಷ ಕೊಳವೆ ಬಾವಿಗಳಲ್ಲಿ ನೀರು ಹಿಂಗಿ ಹೋಗಿದೆ ಕಬ್ಬಿನ ಬೆಳೆ. ತೆಂಗು. ಬಾಳೆ.ಬೆಳೆಗಳು ಒಣಗುತ್ತಿವೆ ಇಂಥಹ ರೈತರನ್ನು ಸಂಕಷ್ಟದಿಂದ ಪಾರು ಮಾಡಬೇಕು. ಅಧಿಕಾರಿಗಳು ಚುನಾವಣಾ ಗುಂಗಿನಲ್ಲಿ ತಲ್ಲೀನರಾಗಿದ್ದಾರೆ.ಇನ್ನಾದರು ಸಂಬಂದ ಪಟ್ಟವರು ರೈತರ ಸಂಕಷ್ಟ ಅರಿತು ಕೊಳ್ಳಲಿ ಸಮರೋಪಾದಿಯಲ್ಲಿ ಪರಿಹಾರ ಕ್ರಮಗಳನ್ನು ಕೈಗೊಳ್ಳಲಿ ಎಂದು ಒತ್ತಾಯಿಸಲು ರಾಜ್ಯದ ಮುಖ್ಯ ಕಾರ್ಯದರ್ಶಿಗಳನ್ನು 15 ರಂದು

ಶಸ್ತ್ರಾಸ್ತ್ರ ರಫ್ತಿಗೆ ಭಾರತದ ಒಲವು

ನವದೆಹಲಿ,ಏ.11– ಜಗತ್ತಿನಾದ್ಯಂತ ಪ್ರಮುಖ ಪ್ರದೇಶಗಳೊಂದಿಗೆ ಕಾರ್ಯತಂತ್ರದ ಸಂಬಂಧಗಳನ್ನು ವಿಸ್ತರಿಸಲು ಮತ್ತು ಶಸ್ತ್ರಾಸ್ತ್ರ ರಫ್ತು ಉತ್ತೇಜಿಸಲು ಭಾರತ ಹಲವು ಹೊಸ ದೇಶಗಳಿಗೆ ಮಿಲಿಟರಿ ಮತ್ತು ರಕ್ಷಣಾ ಉಪಕರಣ ನೀಡಲು ಮುಂದಾಗಿದೆ

ಸೇನೆ, ನೌಕಾಪಡೆ ಮತ್ತು ಭಾರತೀಯ ನೌಕಾಪಡೆಯಿಂದ ಪೋಲೆಂಡ್, ಅರ್ಮೇನಿಯಾ, ತಾಂಜಾನಿಯಾ, ಮೊಜಾಂಬಿಕ್, ಜಿಬೌಟಿ, ಇಥಿಯೋಪಿಯಾ, ಐವರಿ ಕೋಸ್ಟ್ ಮತ್ತು ಫಿಲಿಪ್ಪೈನ್ಸ್‌ಗೆ ಸೇರಿದಂತೆ ಅನೇಕ ದೇಶಗಳಿಗೆ ರಕ್ಷಣಾ ಉಪಕರಣ ರಫ್ತು ಮಾಡಲು ಉದ್ದೇಶಿಸಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ರಷ್ಯಾ, ಇಂಗ್ಲೆಂಡ್ ಮತ್ತು ಫ್ರಾನ್ಸ್ ಸೇರಿದಂತೆ ಇನ್ನಿತರೆ ದೇಶಗಳಿಗೆ ಅಗತ್ಯ ಪ್ರಮಾಣದಲ್ಲಿ ಶಸ್ತ್ರಾಸ್ತ್ರ ಸರಬರಾಜು ಮಾಡಲು ಉದ್ದೇಶಿಸಿದೆ. ಮುಂದಿನ ಹಂತದಲ್ಲಿ, ವಿವಿಧ ದೇಶಗಳಲ್ಲಿ ಸಂಪೂರ್ಣವಾಗಿ 10 ಹೊಸ ರಕ್ಷಣಾ ವಿಭಾಗ ತೆರೆಯಲಾಗುವುದು ಎಂದು ಹೇಳಲಾಗಿದೆ.

ಆಫ್ರಿಕಾ, ಚೀನಾದ ಬೃಹತ್ ಕಾರ್ಯತಂತ್ರ ರಕ್ಷಣಾ ಸಾಮಗ್ರಿ ಸರಬರಾಜಾಗುತ್ತಿರುವ ಹಿನ್ನೆಯಲ್ಲಿ ಆಫ್ರಿಕದ ದೇಶಗಳೊಂದಿಗೆ ನಡೆಯುತ್ತಿರುವ ಯುದ್ಧಾಭ್ಯಾಸಗಳು ಮಿಲಿಟರಿ ವಿನಿಮಯ ಮತ್ತು ತರಬೇತಿ ಕಾರ್ಯಕ್ರಮಗಳ ಹೊರತಾಗಿ, ಭಾರತ ಈಗ ಸ್ವದೇಶಿ ತೇಜಸ್ ಯುದ್ಧವಿಮಾನಗಳು, ಪಿನಾಕಾ ಬಹು–ಉಡಾವಣಾ ರಾಕೆಟ್ ವ್ಯವಸ್ಥೆಗಳು, ಬ್ರಹ್ಮೋಸ್ ಸೂಪರ್ಸಾನಿಕ್ ಕ್ರೂಸ್ ಕ್ಷಿಪಣಿಗಳು ಮತ್ತು ಆಕಾಶ್ ವಾಯು ರಕ್ಷಣಾ ಕ್ಷಿಪಣಿ ವ್ಯವಸ್ಥೆಗಳನ್ನು ರಫ್ತು ಮಾಡಲು ಪ್ರಯತ್ನಿಸುತ್ತಿದೆ.

ಆಫ್ರಿಕನ್ ದೇಶಗಳಾದ ತಾಂಜಾನಿಯಾ, ಮೊಜಾಂಬಿಕ್ ಮತ್ತು ಐವರಿ ಕೋಸ್ಟ್‌ನಲ್ಲಿ, ಸೇರಿದಂತೆ ಇನ್ನತರೆ ದೇಶಗಳಿಗೆ ರಕ್ಷಣಾ ಸಾಮಗ್ರಿ ಸರಬರಾಜು ಮಾಡಲು ಉದ್ದೇಶಿಸಲಾಗಿದೆ.

ಕ್ಯಾನ್ಸರ್ ಎಚ್ಚರಿಕೆ ಲೇಬಲ್ ಮದ್ಯ ಉದ್ಯಮಕ್ಕೆ ಹೊಡೆತ

ನ್ಯೂಯಾರ್ಕ್,ಏ.11–ಆಲ್ಕೊಹಾಲ್ ಯುಕ್ತ ಪಾನೀಯಗಳ ಮೇಲೆ ಕ್ಯಾನ್ಸರ್ ಎಚ್ಚರಿಕೆ ಲೇಬಲ್ ಹಾಕುವಂತೆ ಐರ್ಲೆಂಡ್ ಸರ್ಕಾರ ಸೂಚಿಸಿರುವುದು ಆಲ್ಕೋಹಾಲ್ ಉದ್ಯಮದ ಮೇಲೆ ಹೊಡೆತ ಬೀಳುವ ಸಾಧ್ಯತೆಗಳಿವೆ.

2004 ರಲ್ಲಿ, ಐರ್ಲೆಂಡ್ ಒಳಾಂಗಣದ ಕೆಲಸದ ಸ್ಥಳಗಳಲ್ಲಿ ಧೂಮಪಾನ ಮಾಡುವುದನ್ನು ನಿಷೇಧಿಸಿದೆ. ಈ ನೀತಿಯನ್ನು 70 ದೇಶಗಳಲ್ಲಿ ಅಳವಡಿಸಲಾಗಿತ್ತು. ಇದರ ಬೆನ್ನೆಲ್ಲೆ ಈಗ, ಕ್ಯಾನ್ಸರ್ ಅಪಾಯದ ಬಗ್ಗೆ ಮುನ್ನೆಚ್ಚರಿಕೆ ಹಿನ್ನೆಲೆಯಲ್ಲಿ ಆಲ್ಕೋಹಾಲ್ ಉದ್ಯಮದ ಮೇಲೆ ಗಂಭೀರ ಹೊಡೆತ ಬೀಳುವ ಸಾಧ್ಯತೆಗಳಿವೆ

2026 ರಿಂದ, ಐರ್ಲೆಂಡ್‌ನಲ್ಲಿ ಮಾರಾಟವಾಗುವ ಬಿಯರ್,ವೈನ್ ಮತ್ತು ಮದ್ಯದ ಕಂಟೈನರ್‌ಗಳು ಎರಡು ಎಚ್ಚರಿಕೆಗಳೊಂದಿಗೆ ಕೆಂಪು ದೊಡ್ಡ ಅಕ್ಷರಗಳಲ್ಲಿ ಲೇಬಲ್ ಅನ್ನು ಹೊಂದಿರಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದೆ.

ಮದ್ಯ ಮತ್ತು ಮಾರಕ ಕ್ಯಾನ್ಸರ್‌ಗಳ ನಡುವೆ ನೇರ ಸಂಪರ್ಕವಿದೆ" "ಮದ್ಯಪಾನವು ಯಕೃತ್ತಿನ ಕಾಯಿಲೆಗೆ ಕಾರಣವಾಗುತ್ತದೆ. ಇದರಿಂದ ಕ್ಯಾನ್ಸರ್ ಸೇರಿದಂತೆ ವಿವಿಧ ಕಾಯಿಲೆಗಳಿಗೆ ಕಾರಣವಾಗುತ್ತದೆ ಎನ್ನುವ ಎಚ್ಚರಿಕೆ ನೀಡಿದೆ.

ಚುನಾವಣೆಗಾಗಿ 60 ಕೋಟಿ ಹಿಂಪಡೆದಿದ್ದ ಇಂದಿರಾ ಗಾಂಧಿ

ನವದೆಹಲಿ.ಏ.11: ಭಾರತದ ಮಾಜಿ ಪ್ರಧಾನಿ ಇಂದಿರಾ ಗಾಂಧಿ ಚುನಾವಣಾ ವೆಚ್ಚಕ್ಕಾಗಿ 60 ಕೋಟಿ ರೂ. ಹಣವನ್ನು ಸ್ವಿಸ್ ಬ್ಯಾಂಕ್‌ನಿಂದ ಹಿಂಪಡೆದಿದ್ದರು ಎಂದು

ವರದಿಯಿಂದ ಬಹಿರಂಗವಾಗಿದೆ.

ಡಿ.31 1979ರಲ್ಲಿ ಪ್ರಧಾನಿ ಚೌಧರಿ ಚರಣ್ ಸಿಂಗ್ ಭುವನೇಶ್ವರದ ಹಜರತ್ ಮಹಲ್ ಪಾರ್ಕ್‌ನಲ್ಲಿ ಇಂದಿರಾ ಗಾಂಧಿ ಸ್ವಿಸ್ ಬ್ಯಾಂಕ್‌ನಿಂದ ಹಣ ಹಿಂಪಡೆದ ಬಗ್ಗೆ ಮಾತಾಡಿದ್ದರು.

ಬೆಂಗಳೂರಿನಲ್ಲಿ ಎಂಬಿಸಿ ಅಕಾಡೆಮಿ ಆರಂಭ

ಬೆಂಗಳೂರು,ಏ.11–ಭಾರತದ ಪ್ರಮುಖ ರಿಯಲ್ ಎಸ್ಟೇಟ್ ಡೆವಲಪರ್ಗಳಲ್ಲಿ ಒಂದಾದ ಎಂಬಸಿ ಗ್ರೂಪ್ ತನ್ನ ಹೊಸ ಸ್ಮಾರ್ಟ್ ಕೆ12 ಎಂಬಸಿ ಅಕಾಡೆಮಿ ಶಾಲೆಯ ಕ್ಯಾಂಪಸ್ ಅನ್ನು ಉದ್ಘಾಟಿಸಿದೆ.

ಈ ಸಮಾರಂಭದ ಅಧ್ಯಕ್ಷತೆಯನ್ನು ಜಿತು ವಿರ್ವಾನಿ, ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು ಎಂಬಸಿ ಗ್ರೂಪ್, ರಾಜ್ ವಿರ್ವಾನಿ, ಬಿಸಿ ರಾಜೇಶ್ವರಿ ಎಂಬಾಸಿ ಅಕಾಡೆಮಿಯ ಪ್ರಾಂಶುಪಾಲರು, ಸ್ಟೆಫಾನೊ ಡಿ ನಾಪೋಲಿ, ಎಂಬಸಿ ಅಕಾಡೆಮಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಮಾರಿಯಾ ಜಖರೋವಾ, ಆಡಳಿತ ಮಂಡಳಿಯ ಅಧ್ಯಕ್ಷರು,ಎಂಬಸಿ ಅಕಾಡೆಮಿ, ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

ಇದು ಉತ್ತರ ಬೆಂಗಳೂರಿನ ದೇವನಹಳ್ಳಿಯಲ್ಲಿರುವ ಎಂಬಸಿ ಸ್ಪ್ರಿಂಗ್ಸ್ ವಿಸ್ತಾರವಾದ ಸಮಗ್ರ ಟೌನ್ಶಿಪ್ನ ನಡುವೆ ಇದ್ದು ಈ ಕ್ಯಾಂಪಸ್ ಅನ್ನು ಸಿಂಗಾಪುರದ ಹೆಸರಾಂತ ಆಂಡಿ ಫಿಶರ್ ವರ್ಕ್‌ಶಾಪ್ ವಿನ್ಯಾಸಗೊಳಿಸಿದೆ. ಎಂಬಸಿ ಗ್ರೂಪ್ 2008ರಲ್ಲಿ ಸ್ಟೋನ್ಹಿಲ್ ಇಂಟರ್ನ್ಯಾಶನಲ್ ಸ್ಕೂಲ್ ಅನ್ನು ಪ್ರಾರಂಭಿಸುವುದರೊಂದಿಗೆ ಶಿಕ್ಷಣ ರಂಗಕ್ಕೆ ಮೊದಲು ಪ್ರವೇಶಿಸಿತು.

ಸ್ಪರ್ಧಾತ್ಮಕ ಹೊಸ ಜಗತ್ತಿನಲ್ಲಿ ಯಶಸ್ವಿಯಾಗಲು ವಿದ್ಯಾರ್ಥಿಗಳನ್ನು ಸಿದ್ಧಪಡಿಸುವ ಶಾಲೆಯ ಅಗತ್ಯದಿಂದ ಎಂಬಸಿ ಅಕಾಡೆಮಿಯನ್ನು ಹುಟ್ಟು ಹಾಕಲಾಗಿದೆ.

ಪ್ರಪಂಚದ ಮೇಲೆ ಸಕಾರಾತ್ಮಕ ಪ್ರಭಾವ ಬೀರಲು ಅನುವು ಮಾಡಿಕೊಡುವ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವ ಮೂಲಕ ಜೀವನ ಪರ್ಯಂತ ಕಲಿಯುವವರು ಮತ್ತು ಸಾಮಾಜಿಕ ಜವಾಬ್ದಾರಿಯುತ ನಾಗರಿಕರನ್ನು ಪೋಷಿಸುವ ಗುರಿಯನ್ನು ನಾವು ಹೊಂದಿದ್ದೇವೆ ಎಂದು ಹೇಳಿದರು.

ನಂತರ ಮಾತನಾಡಿದ ಎಂಬಸಿ ಅಕಾಡೆಮಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಸ್ಟೆಫಾನೊ ಡಿ ನಾಪೋಲಿ ಅವರು ವಿಜ್ಞಾನ, ಗಣಿತ, ಕಂಪ್ಯೂಟರ್ಗಳು ಮತ್ತು ರೊಬೊಟಿಕ್ಸ್ಗಾಗಿ ಸುಧಾರಿತ ಲ್ಯಾಬ್ಗಳನ್ನು ಒಳಗೊಂಡಿರುವ ಅತ್ಯಾಧುನಿಕ ಸೌಲಭ್ಯಗಳನ್ನು ಒದಗಿಸುವ ಅಂತರರಾಷ್ಟ್ರೀಯ ಮಾನದಂಡಗಳ ಅಸಾಧಾರಣ ಮೂಲಸೌಕರ್ಯದೊಂದಿಗೆ ನಮ್ಮ ಕ್ಯಾಂಪಸ್ ತನ್ನನ್ನು ತಾನೇ ಗುರುತಿಸಿಕೊಂಡಿದೆ. ಹೆಚ್ಚುವರಿಯಾಗಿ, ನಾವು ಸಂಗೀತ, ಕಲೆಗಳು ಮತ್ತು ನೃತ್ಯಕ್ಕಾಗಿ ಮೀಸಲಾದ ಸ್ಥಳಗಳನ್ನು ಹೊಂದಿದ್ದೇವೆ ಎಂದು ತಿಳಿಸಿದರು. ಯೂನಿಕ್ ಟ್ಯಾಲೆಂಟ್ ಶೋನ ಗೌರವ ಅತಿಥಿ ಮತ್ತು ತೀರ್ಪುಗಾರರಾಗಿ ಬೆಂಗಳೂರಿನ ಫ್ಯಾಶನ್ ಸ್ಟೈಲಿಸ್ಟ್, ಸಲಹೆಗಾರ, ಮತ್ತು ನೃತ್ಯ ಸಂಯೋಜಕರಾದ ಶ್ರೀ ಪ್ರಸಾದ್ ಬಿದ್ದಪ ಭಾಗವಹಿಸಿದ್ದರು.

ರಂಜಾನ್ ಹಬ್ಬದ ಅಂಗವಾಗಿ ಕೆಪಿಸಿಸಿ ಸದಸ್ಯ ಎಸ್.ಬಿ.ಭಾಷಾ ನೇತೃತ್ವದಲ್ಲಿ ಯಲಹಂಕದ ರೈಲು ಮತ್ತು ಗಾಲಿ ಈದ್ಗಾ ಮೈದಾನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎಂ.ಆರ್.ಸೀತಾರಾಮು ಮುಸ್ಲಿಂ ಬಾಂಧವರಿಗೆ ಶುಭಕೋರಿದರು. ನಂತರ ಚಿಕ್ಕಬಳ್ಳಾಪುರ ಲೋಕಸಭಾ ಅಭ್ಯರ್ಥಿ ರಕ್ಷಾರಾಮಯ್ಯ ಪರ ಮತಯಾಚನೆ ಮಾಡಿದರು. ಈ ವೇಳೆ ಮಾಜಿ ಶಾಸಕ ಪ್ರಸನ್ನಕುಮಾರ್,ಗೋಪಾಲಕೃಷ್ಣ, ವೈ.ಎನ್. ಅಶ್ವಥ್,ವೈ.ಆರ್.ಶ್ರೀಧರ್ ಸೇರಿದಂತೆ ಇನ್ನಿತರರಿದ್ದರು

20 ಮಿಲಿಯನ್‌ಗೂ ಹೆಚ್ಚು ಬಳಕೆದಾರರನ್ನು ತಲುಪಿದ ಜಾರ್

ಬೆಂಗಳೂರು,ಏ.11:ಬಳಕೆದಾರ ಸ್ನೇಹಿ ವ್ಯವಸ್ಥೆ, ಸರಳೀಕೃತ ಗ್ರಾಹಕ ಹರಿವು ಮತ್ತು ಆಧುನಿಕ ವಿನ್ಯಾಸ, ಉಳಿತಾಯಕ್ಕೆ ನವೀನ ವಿಧಾನಗಳಿಂದ ಡಿಜಿಟಲ್ ಚಿನ್ನದ ಉಳಿತಾಯ ಅಪ್ಲಿಕೇಶನ್ ಜಾರ್‌ನ ಬಳಕೆದಾರರ ಸಂಖ್ಯೆಯು 20 ಮಿಲಿಯನ್‌ಗೂ ಹೆಚ್ಚಿದೆ. ಜಾರ್ ಬಳಕೆದಾರರು ಪ್ರತಿ ತಿಂಗಳು ಸರಿಸುಮಾರು 22 ಬಾರಿ ಉಳಿತಾಯ ಮಾಡುವುದಲ್ಲದೆ, ಜಾಲತಾಣದಲ್ಲಿ ನಿತ್ಯವೂ 1 ಮಿಲಿಯನ್‌ಗೂ ಅಧಿಕ ವಹಿವಾಟು ನಡೆಸುತ್ತಿದ್ದು, ಡಿಜಿಟಲ್ ಚಿನ್ನದ ಮಾರುಕಟ್ಟೆಯಲ್ಲಿ ಜಾರ್ ಸಂಸ್ಥೆಯು ನಾಯಕನಾಗಿ ಗುರುತಿಸಿಕೊಂಡಿದೆ.

ಜಾರ್‌ಗ್ರಾಹಕರಿಗೆ ಕೇವಲ 45 ಸೆಕೆಂಡುಗಳಲ್ಲಿ ಸುವ್ಯವಸ್ಥಿತ ಹೂಡಿಕೆ ಪ್ರಯಾಣವನ್ನು ನೀಡುತ್ತದೆ ಮತ್ತು ಗ್ರಾಹಕರು ಕನಿಷ್ಟ ರೂ. 10ನಿಂದ 24ಕೆ, 99.9% ಶುದ್ಧ ಡಿಜಿಟಲ್ ಚಿನ್ನದಲ್ಲಿ ಹೂಡಿಕೆ ಮಾಡುವ ಅವಕಾಶ ಕಲ್ಪಸಿದೆ. ಡಿಜಿಟಲ್ ಚಿನ್ನವು ಭೌತಿಕ

ಚಿನ್ನವನ್ನು ಪ್ರತಿನಿಧಿಸುವುದಲ್ಲದೆ, ಅದನ್ನು ರಕ್ಷಕ–ನಿರ್ವಹಣೆಯ ವಾಲೆಟ್‌ಗಳಲ್ಲಿ ಸುರಕ್ಷಿತವಾಗಿ ಸಂಗ್ರಹಿಸಲಾಗುತ್ತದೆ. ಜಾರ್‌ನೊಂದಿಗೆ, ಬಳಕೆದಾರರು ಸುವ್ಯವಸ್ಥಿತವಾಗಿ ಉಳಿತಾಯ ಮಾಡಬಹುದು ಮತ್ತು ಅವಶ್ಯವಿದ್ದಾಗ ನಗದಾಗಿ ಪರಿವರ್ತಿಸಬಹುದು ಅಥವಾ

ಅನುಕೂಲಕ್ಕೆ ತಕ್ಕಂತೆ ಭೌತಿಕ ಚಿನ್ನವನ್ನು ಪಡೆಯಬಹುದು. ಜಾರ್‌ನ ಕ್ರಾಂತಿಕಾರಿ ರೌಂಡ್–ಆಫ್ ವಿಧಾನವು ಡಿಜಿಟಲ್ ವಹಿವಾಟುಗಳಿಂದ ಬಿಡುವಿನ ಬದಲಾವಣೆಯನ್ನು ಸಲೀಸಾಗಿ ಸಂಗ್ರಹಿಸುತ್ತದೆ ಮತ್ತು ಅದನ್ನು ಡಿಜಿಟಲ್ ಚಿನ್ನದಲ್ಲಿ ಹೂಡಿಕೆ ಮಾಡುತ್ತದೆ ಆದ್ದರಿಂದ ಬಳಕೆದಾರರು ಪ್ರತಿ ತಿಂಗಳು ಹೆಚ್ಚುವರಿ ಬಿಟ್‌ಅನ್ನು ಉಳಿಸಬಹುದು.

ಕಂಪನಿಯ ಈ ಗಮನಾರ್ಹ ಬೆಳವಣಿಗೆಯು ಗಮನಕ್ಕೆ ಬಂದಿಲ್ಲ. ಬೆಸ್ಟ್ ವೆಲ್ತ್‌ಟೆಕ್ ಸ್ಟಾರ್ಟ್‌ಅಪ್ ವಿಭಾಗದಲ್ಲಿ ಜಾರ್ ಸಂಸ್ಥೆ ಗ್ಲೋಬಲ್ ಫಿನ್‌ಟೆಕ್ ಅವಾರ್ಡ್ಸ್–2023ನ್ನು ಗೆದ್ದಿದ್ದಾರೆ ಮತ್ತು ದೇಶದ ಅಗ್ರ ಯುಪಿಐ ಸ್ವಯಂ–ಪಾವತಿ ವಿಧಾನ ಬಳಸಿಕೊಂಡಿರುವವರಲ್ಲಿ ಒಬ್ಬರು ಎಂದು ಉಲ್ಲೇಖಿಸಲಾಗಿದೆ.

ಯುವಕರನ್ನು ಕಾಡುತ್ತಿದೆ ಸಂಧಿವಾತ:

ಡಾ. ರಾಜಶೇಖರ್

ಬೆಂಗಳೂರು, ಏ. 11– ಸವೆದ ಮಂಡಿಗಳು ಮತ್ತು ಅಪಾರ ನೋವಿನಿಂದ ಕೂಡಿದ ಸಂಧಿಗಳು ವಯಸ್ಸಾಗುವಿಕೆಯ ಅನಿವಾರ್ಯ ಸಮಸ್ಯೆ ಎಂದು ಹಲವಾರು ದಶಕಗಳಿಂದ ಭಾವಿಸಲಾಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ ವೈದ್ಯರುಗಳು ಒಂದು ಅಚ್ಚರಿದಾಯಕ ಪ್ರವೃತ್ತಿಯನ್ನು ಕಾಣುತ್ತಿದ್ದಾರೆ. 20 ಮತ್ತು 30ರ ಹರೆಯದ ಯುವ ಜನರು ಕೂಡ ಹೆಚ್ಚೆಚ್ಚು ಪ್ರಮಾಣದಲ್ಲಿ ತೀವ್ರವಾದ ಸಂಧಿನೋವಿಗೆ ಒಳಗಾಗುತ್ತಿದ್ದಾರೆ ಎನ್ನುವುದೇ ಆ ಆಶ್ಚರ್ಯಕರ ಬೆಳವಣಿಗೆ ಆಗಿದೆ. ಇದು ಅಸ್ಥಿಸಂಧಿವಾತ (ಒಸ್ಟಿಯೋಆರ್ಥ್ರಿಟಿಸ್–ಒಎ) ಸಮಸ್ಯೆಯು ಬಹಳ ಬೇಗನೆ ಕಾಡುತ್ತದೆ ಎಂಬ ಕಳವಳ ಹೆಚ್ಚಾಗಲು ಕಾರಣವಾಗಿದೆ. ಇದು ಈ ವ್ಯಾಧಿಯನ್ನು ಪ್ರಸ್ತುತ ಅರ್ಥ ಮಾಡಿಕೊಂಡಿರುವುದಕ್ಕೇ ಸವಾಲು ಹಾಕುತ್ತದೆ. ಮತ್ತು ತಾರುಣ್ಯದಲ್ಲೇ ಅಸ್ಥಿಸಂಧಿವಾತ ಉಂಟಾಗಲು ಕಾರಣವಾಗುವ ಬದಲಾವಣೆಯ ಅಂಶಗಳನ್ನು ತುಂಬಾ ನಿಕಟವಾಗಿ ಪರಿಶೀಲಿಸುವುದು ಅಗತ್ಯವಾಗುವಂತೆ ಮಾಡಿದೆ.

ಯುವಜನರಲ್ಲಿ ಅಸ್ಥಿಸಂಧಿವಾತ ರೋಗವು ಆಘಾತಕಾರಿ ರೀತಿಯಲ್ಲಿ ಏರಿಕೆ ಆಗುತ್ತಿದೆ. ಅದಕ್ಕೆ ಕಾರಣವಾಗುವ ಕೆಲವು ಸಾಮಾನ್ಯ ಕಾರಣಗಳನ್ನು ಈ ಕೆಳಗೆ ವಿವರಿಸಲಾಗಿದೆ. ಜನರು ಎಚ್ಚರಿಕೆಯಿಂದ ಇರಬೇಕು

ಆಘಾತಕಾರಿ ಎನ್ನಬಹುದಾದ ಶೇ. 80ರಷ್ಟು ಹದಿಹರೆಯದವರು ಮತ್ತು ಶೇ. 27ರಷ್ಟು ಯುವಜನರು ಶಿಫಾರಸು ಮಾಡಲಾದ ದೈಹಿಕ ಚಟುವಟಿಕೆಗಳ ಮಟ್ಟವನ್ನು ಪೂರೈಸಲು ವಿಫಲರಾಗುತ್ತಾರೆ. ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯು. ಎಚ್.ಒ.) ಜಡತ್ವದ ಕುರಿತು ಈ ಆಘಾತಕಾರಿ ವಿಷಯವನ್ನು ತಿಳಿಸಿದೆ. ಚಟುವಟಿಕೆಗಳಲ್ಲಿನ ಈ ಕೊರತೆಯಿಂದಾಗಿ ಮೃದ್ವಸ್ಥಿ ಮತ್ತು ಮಾಂಸಖಂಡಗಳು ದುರ್ಬಲಗೊಳ್ಳುತ್ತವೆ. ಇದು ಅಸ್ಥಿಸಂಧಿವಾತ (ಒಎ) ರೋಗದ ಅಪಾಯ ಉಂಟಾಗಲು ಪ್ರಮುಖ ಕಾರಣವಾಗಿದೆ.

ಬೊಜ್ಜು: ದೇಹದ ಬೊಜ್ಜಿನಿಂದಾಗಿ ಭಾರವನ್ನು ಹೊರುವ ಮಂಡಿ ಮತ್ತು ಸೊಂಟದ ಮೇಲೆ ಹೆಚ್ಚುವರಿ ಭಾರ ಬೀಳುತ್ತದೆ. ಇದರಿಂದಾಗಿ ಮೃದ್ವಸ್ಥಿ ದುರ್ಬಲಗೊಳ್ಳುವ ಪ್ರಕ್ರಿಯೆ ತ್ವರಿತಗೊಂಡು ಅಸ್ಥಿಸಂಧಿವಾತ ರೋಗ ಉಂಟಾಗುತ್ತದೆ.

ಪ್ರತಿ ವಾರ, ಮಧ್ಯಮ–ತೀವ್ರತೆಯ ವ್ಯಾಯಾಮಗಳಿಗೆ ಕನಿಷ್ಠ 150 ನಿಮಿಷ ಅಥವಾ ತೀವ್ರ ಪ್ರಮಾಣದ ವ್ಯಾಯಾಮಗಳಿಗೆ 75 ನಿಮಿಷ ಮೀಸಲಿಡುವ ಗುರಿ ಇಟ್ಟುಕೊಳ್ಳಿ. ಈಜು, ಸೈಕ್ಲಿಂಗ್ ಮತ್ತು ಯೋಗದಂಥ ಕಡಿಮೆ–ಪರಿಣಾಮದ ಚಟುವಟಿಕೆಗಳು ಅದ್ಭುತವಾದ ಆಯ್ಕೆಗಳು ಆಗಿವೆ ಎಂದು

ನಗರದ ಅಪೋಲೋ ಆಸ್ಪತ್ರೆಯ ಮೂಳೆ ಮತ್ತು ಜಂಟಿ ಬದಲಿ ಶಸ್ತ್ರಚಿಕಿತ್ಸಕ, ಹಿರಿಯ ಸಲಹೆಗಾರ ಡಾ. ರಾಜಶೇಖರ್. ಕೆ.ಟಿ. ಅವರು ತಿಳಿಸಿದ್ದಾರೆ.

ಅಧಿಕ ಭಾರವು ಸಂಧಿಗಳ ಮೇಲೆ ಅನಗತ್ಯವಾದ ಭಾರವನ್ನು ಹೇರುತ್ತದೆ. ಇದು ಅಸ್ಥಿಸಂಧಿವಾತದ ಅಪಾಯವನ್ನು ಹೆಚ್ಚಿಸುತ್ತದೆ. ಸಮತೋಲಿತ ಆಹಾರ ಸೇವನೆ ಮತ್ತು ನಿಯಮಿತವಾದ ದೈಹಿಕ ಚಟುವಟಿಕೆ ಇವುಗಳು ತೂಕದ ನಿರ್ವಹಣೆಗೆ ಪ್ರಮುಖ ಮಾರ್ಗವಾಗಿವೆ.

ಸತತವಾಗಿ ಸಂಧಿ ನೋವಿನ ಮೊದಲ ಸೂಚನೆ ಕಂಡು ಬಂದಾಗಲೇ ವೈದ್ಯರ ಜೊತೆ ಸಮಾಲೋಚನೆ ನಡೆಸಿದರೆ ವ್ಯಾಧಿಯನ್ನು ಬೇಗನೆ ಪತ್ತೆ ಹಚ್ಚಲು ಸಾಧ್ಯವಾಗುತ್ತದೆ. ಹಾಗೂ ಸಕಾಲದಲ್ಲಿ ಚಿಕಿತ್ಸೆಗೆ ಮಧ್ಯ ಪ್ರವೇಶ ಮಾಡಲು ಆಗುತ್ತದೆ. ಇದು ದೀರ್ಘಾವಧಿಯ ಫಲಿತಾಂಶಗಳು ಗಣನೀಯವಾಗಿ ಸುಧಾರಿಸಲು ನೆರವಾಗುತ್ತದೆ ಎಂದು ಹೇಳಿದ್ದಾರೆ.

SESHADRIPURAM INSTITUTIONS
ADMISSION ENQUIRIES OPEN
for 1st Year Degree Programs: 2024-25

Seshadripuram College
NAAC Accredited A++
27, Nagappa Street, Seshadripuram, Bengaluru - 560020.
Contact : Dr. B. G. Bhaskara, Principal Tel: 22955354.
website: www.spmcollege.ac.in
B.B.A. | B.C.A.
B.Com | B.Com (A&F) | B.Com. (Logistics & Supply Chain Management)

Seshadripuram Evening College
NAAC Accredited A
27, Nagappa Street, Seshadripuram, Bengaluru - 560020.
Contact : Dr. N. S. Satish, Principal Tel: 22955356. www.sedc.ac.in
B.Com | B.B.A. | B.C.A.

Seshadripuram Institute of Commerce & Management
40, Girls' School Street, Seshadripuram, Bengaluru - 560020.
Contact : Prof. Vidya Shivannavar, Principal Tel : 22955382. www.sicm.edu.in
B.Com | B.Com (BDA) | B.B.A. | B.C.A.

Seshadripuram Academy of Business Studies
18, 2nd Main, Kengeri Satellite Town, Bengaluru - 560060.
Contact : Prof. Jayarama, Principal Tel : 28488676 website: www.sabs.ac.in
B.Com | B.B.A. | B.C.A.

Seshadripuram First Grade College
NAAC Accredited A+
26, Yelahanka New Town, Bengaluru - 560064.
Contact : Dr. S. N. Venkatesh, Principal Tel : 22955369 website: www.sfgc.ac.in
B.Com, B.Com (BDA), B.B.A., BBA (Aviation), B.C.A., B.Sc. EMC / BBG

Seshadripuram Law College
1, Govinda Rao Street, Seshadripuram, Bengaluru - 560020.
Contact : Dr. Praneetha B. S. Principal Tel : 22955367
website: www.spmlawcollege.ac.in.
LL.B. (3 Years) B.A., LL.B. (5 Years)

N. R. Pandith Aradhya
President

Dr. Wooday P. Krishna
Honorary General Secretary

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ–ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಆದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

CHANGE OF NAME

I, **Irudayaraj** R/at No. 67, 2nd floor, 7th main road, ITI Layout, chinnappa Garden, Benson Town, Bengaluru-560046. have Changed My Name to **Irudyaraj. Anthony,** Vide Affidavit dated 10-04-2024. Sworn before notary **K.VENKATESHAN**, Bangalore.

ಪೋಸ್ಟಲ್ ಬ್ಯಾಲೆಟ್ ಸೂಚನೆ ಮತ್ತು ಇ–ವೋಟಿಂಗ್ ಮಾಹಿತಿ
B&B ಟ್ರಿಪಲ್‌ವಾಲ್ ಕಂಟೈನರ್‌ಗಳು ಲಿಮಿಟೆಡ್ (L21015KA2011PLC060106)
ರಿಜಿಸ್ಟರ್ ಕಛೇರಿ: ಸೈಟ್ ನಂ. 263/2/3, ಮರಸೂರು ಮಡಿವಾಳ, ಕಸಬಾ ಹೋಬಳಿ
ಆನೇಕಲ್ ತಾಲೂಕು, ಬೆಂಗಳೂರು, ಕರ್ನಾಟಕ, 562106
Website:: https://boxandboard.in/Email: cs@boxandboard.in

ಕಂಪನಿಗಳ ಕಾಯಿದೆ, 2013 ("ಆಕ್ಟ್") ನ ನಿಯಮಗಳು 20 ಮತ್ತು 22 ರ ಜೊತೆಗೆ ಸೆಕ್ಷನ್ 110 ಮತ್ತು ಇತಡಿ ಸಂಬಂಧಿತ ನಿಬಂಧನೆಗಳ ನಿಬಂಧನೆಗಳಿಗೆ ಅನುಸಾರವಾಗಿ ಮತ್ತು ಅನುಸಾರವಾಗಿ ಕಂಪನಿಯ ಸದಸ್ಯರಿಗೆ ಈ ಮೂಲಕ ತಿಳಿಸಲಾಗಿದೆ. ಕಂಪನಿಗಳು (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ("ನಿಯಮಗಳು"), ನಿಬಂಧನೆ 44, ಮತ್ತು ಸೆಕ್ಯುರಿಟೀಸ್ ಮತ್ತು ಎಕ್ಸ್ಚೇಂಜ್ ಬೋರ್ಡ್ ಆಫ್ ಇಂಡಿಯಾದ ಇತರ ಅನ್ವಯವಾಗುವ ನಿಯಮಗಳು (ಪಟ್ಟಿ ಮಾಡುವ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅವಶ್ಯಕತೆಗಳು) ನಿಯಮಗಳು, 2015 ("ಸೆಬಿ ಐಡಿಆರ್ ನಿಯಮಗಳು"), ಸದ್ಯಕ್ಕೆ ಜಾರಿಯಲ್ಲಿರುವ ಯಾವುದೇ ಶಾಸನಬದ್ಧ ಮಾರ್ಪಾಡು ಅಥವಾ ಮರು–ಅನುಷ್ಠಾನ ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಹೊರಡಿಸಿದ ಸಾಮಾನ್ಯ ಸುತ್ತೋಲೆಗಳು, ಕಂಪನಿಯು ಅಂಚೆ ಮತಪತ್ರದ ಮೂಲಕ ಕಂಪನಿಯ ಷೇರುದಾರರ ಅನುಮೋದನೆಯನ್ನು ಕೋರುತ್ತಿದೆ. ಈ ಅನುಮೋದನೆ ಪ್ರಕ್ರಿಯೆಯನ್ನು 09.04.2024 ದಿನಾಂಕದ ಅಂಚೆ ಮತಪತ್ರದಲ್ಲಿ ವಿವರಿಸಿರುವ ನಿರ್ಣಯಗಳಿಗೆ ಎಲೆಕ್ಟ್ರಾನಿಕ್ ವಿಧಾನಗಳ ಮೂಲಕ ("ರಿಮೋಟ್ ಇ–ವೋಟಿಂಗ್") ನಡೆಸಲಾಗುವುದು.

ಅನ್ವಯವಾಗುವ MCA ಸುತ್ತೋಲೆಗಳಿಗೆ ಅನುಸಾರವಾಗಿ, ವಿವರಣಾತ್ಮಕ ಹೇಳಿಕೆ ಮತ್ತು ರಿಮೋಟ್ ಇ–ವೋಟಿಂಗ್ ಸೂಚನೆಗಳೊಂದಿಗೆ ಅಂಚೆ ಮತಪತ್ರ ಸೂಚನೆಯನ್ನು 12.04.2024 ರಂದು ವಿದ್ಯುನ್ಮಾನವಾಗಿ ಸದಸ್ಯರ ನೋಂದಣಿ/ಲಾಭದಾಯಕ ಮಾಲೀಕರ ಪಟ್ಟಿಯಲ್ಲಿ ಪಟ್ಟಿ ಮಾಡಲಾದ ಎಲ್ಲಾ ಸದಸ್ಯರಿಗೆ ಕಳುಹಿಸಲಾಗುತ್ತದೆ. ಕಟ್–ಆಫ್ ದಿನಾಂಕ, 12.04.2024. ಕಂಪನಿ/ಠೇವಣಿ ಭಾಗವಹಿಸುವವರೊಂದಿಗೆ ("DP ಗಳು") ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಿದವರಿಗೆ ಈ ಸಂವಹನವನ್ನು ಕಳುಹಿಸಲಾಗಿದೆ. ಪರಿಣಾಮವಾಗಿ, ಪೋಸ್ಟಲ್ ಬ್ಯಾಲೆಟ್ ನೋಟೀಸ್ ಮತ್ತು ಸಂಬಂಧಿತ ದಾಖಲೆಗಳ ಭೌತಿಕ ಪ್ರತಿಗಳನ್ನು ಷೇರುದಾರರಿಗೆ ಕಳುಹಿಸಲಾಗುವುದಿಲ್ಲ ಮತ್ತು ರಿಮೋಟ್ ಇ–ವೋಟಿಂಗ್ ಸಿಸ್ಟಮ್ ಮೂಲಕ ಮಾತ್ರ ತಮ್ಮ ಒಪ್ಪಿಗೆ ಅಥವಾ ಅಸಮ್ಮತಿಯನ್ನು ವ್ಯಕ್ತಪಡಿಸಲು ಷೇರುದಾರರಿಗೆ ವಿನಂತಿಸಲಾಗಿದೆ. ಇದಲ್ಲದೆ, ಪೋಸ್ಟಲ್ ಬ್ಯಾಲೆಟ್ ನೋಟೀಸ್ ಕಂಪನಿಯ ವೆಬ್‌ಸೈಟ್‌ನಲ್ಲಿ https://boxandboard.in/ನಲ್ಲಿ ಲಭ್ಯವಿದೆ ಮತ್ತು ಕಂಪನಿಯ ಷೇರುಗಳನ್ನು ಪಟ್ಟಿ ಮಾಡಲಾದ ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳಲ್ಲಿ ಅಂದರೆ NSE ಮತ್ತು BSE ನಲ್ಲಿ ಲಭ್ಯವಿದೆ. ರಿಮೋಟ್ ಇ–ವೋಟಿಂಗ್ ಅನ್ನು ಸುಲಭಗೊಳಿಸಲು, ಕಂಪನಿಯು ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ (CDSL) ಸೇವೆಗಳನ್ನು ತೊಡಗಿಸಿಕೊಂಡಿದೆ. ರಿಮೋಟ್ ಇ–ವೋಟಿಂಗ್‌ಗೆ ವಿವರವಾದ ಸೂಚನೆಗಳನ್ನು ಪೋಸ್ಟಲ್ ಬ್ಯಾಲೆಟ್ ನೋಟಿಸ್‌ನಲ್ಲಿ ನೀಡಲಾಗಿದೆ. ರಿಮೋಟ್ ಇ–ವೋಟಿಂಗ್ ಅವಧಿಯು ಸೋಮವಾರ, 15.04.2024 ರಂದು ಬೆಳಿಗ್ಗೆ 09:00 IST ಪ್ರಾರಂಭವಾಗುತ್ತದೆ ಮತ್ತು ಬುಧವಾರ, 15.05.2024 ರಂದು ಸಂಜೆ 05:00 ಗಂಟೆಗೆ ಮುಕ್ತಾಯಗೊಳ್ಳುತ್ತದೆ. IST ಅದರ ನಂತರ ಮತದಾನಕ್ಕಾಗಿ ರಿಮೋಟ್ ಇ–ವೋಟಿಂಗ್ ಮಾಡ್ಯೂಲ್ ಅನ್ನು ನಿಷ್ಕ್ರಿಯಗೊಳಿಸಲಾಗುತ್ತದೆ. ಇ–ವೋಟಿಂಗ್ ಸದಸ್ಯರಿಂದ ಒಮ್ಮೆ ಮತವನ್ನು ಚಲಾಯಿಸಿದರೆ, ನಂತರ ಅದನ್ನು ಬದಲಾಯಿಸಲಾಗುವುದಿಲ್ಲ. ಸದಸ್ಯರ ಮತದಾನದ ಹಕ್ಕುಗಳು ಕಟ್–ಆಫ್ ದಿನಾಂಕದಂತೆ ಕಂಪನಿಯ ಒಟ್ಟು ಪಾವತಿಸಿದ ಷೇರು ಬಂಡವಾಳದಲ್ಲಿ ಅವರ ಷೇರುಗಳ ಪಾವತಿಸಿದ ಮೌಲ್ಯಕ್ಕೆ ಅನುಪಾತದಲ್ಲಿರುತ್ತದೆ. ಕಟ್–ಆಫ್ ದಿನಾಂಕದಂದು ಸದಸ್ಯರ ರಿಜಿಸ್ಟರ್ / ಲಾಭದಾಯಕ ಮಾಲೀಕರ ಪಟ್ಟಿಯಲ್ಲಿ ಹೆಸರುಗಳನ್ನು ದಾಖಲಿಸಿದವರು ಮಾತ್ರ ರಿಮೋಟ್ ಇ–ವೋಟಿಂಗ್ ಸೌಲಭ್ಯವನ್ನು ಪಡೆಯಲು ಅರ್ಹರಾಗಿರುತ್ತಾರೆ .ಪೋಸ್ಟಲ್ ಬ್ಯಾಲೆಟ್ ಸೂಚನೆ ಮತ್ತು ಇ–ವೋಟಿಂಗ್ ಮಾಹಿತಿ MCA ಸುತ್ತೋಲೆಗಳಿಗೆ ಅನುಸಾರವಾಗಿ, ತಮ್ಮ ಇಮೇಲ್ ವಿಳಾಸಗಳನ್ನು ಇನ್ನೂ ನೋಂದಾಯಿಸದ ಮತ್ತು ಪರಿಣಾಮವಾಗಿ ಅಂಚೆ ಮತಪತ್ರ ಸೂಚನೆಯನ್ನು ಸ್ವೀಕರಿಸಲು ಸಾಧ್ಯವಾಗದ ಸದಸ್ಯರು ತಮ್ಮ ಇಮೇಲ್ ವಿಳಾಸಗಳನ್ನು ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್ ("RTA"), Purva Sharegistry (India) Pvt Ltd ನಲ್ಲಿ ತಾತ್ಕಾಲಿಕವಾಗಿ ನೋಂದಾಯಿಸಿಕೊಳ್ಳಬಹುದು. ಇಮೇಲ್ ವಿಳಾಸಗಳ ಶಾಶ್ವತ ನೋಂದಣಿಗಾಗಿ, ಷೇರುದಾರರು ತಮ್ಮ ಇಮೇಲ್ ವಿಳಾಸಗಳನ್ನು ಡಿಪಾಸಿಟರಿಯೊಂದಿಗೆ ಸಂಬಂಧಿತ ಆಕಿ ಗಳ ಮೂಲಕ ಮತ್ತು ಕಂಪನಿಯ ಖಟಿಂ ಯೊಂದಿಗೆ ಸೂಕ್ತ ವಿಧಾನವನ್ನು ಅನುಸರಿಸಿ ನೋಂದಾಯಿಸಿಕೊಳ್ಳಬೇಕಾಗುತ್ತದೆ.

ಪೋಸ್ಟಲ್ ಬ್ಯಾಲೆಟ್ ನೋಟಿಸ್‌ನಲ್ಲಿ ಒದಗಿಸಲಾದ ಸೂಚನೆಗಳನ್ನು ಎಚ್ಚರಿಕೆಯಿಂದ ಪರಿಶೀಲಿಸುವಂತೆ ನಾವು ಸದಸ್ಯರನ್ನು ಕೋರುತ್ತೇವೆ. ಯಾವುದೇ ಪ್ರಶ್ನೆಗಳಿಗೆ, ದಯವಿಟ್ಟು ಷೇರುದಾರರಿಗಾಗಿ ಪದೇ ಪದೇ ಕೇಳಲಾಗುವ ಪ್ರಶ್ನೆಗಳನ್ನು (ಈಂಕ್ಕಿ) ಮತ್ತು ಇ–ವೋಟಿಂಗ್ ಬಳಕೆದಾರರ RTA, Purva Sharegistry (India) Pvt. Ltd : support@purvashare.com. ವಿನಂತಿಯ ಮೇರೆಗೆ, ಅಂಚೆ ಮತಪತ್ರದಲ್ಲಿ ಉಲ್ಲೇಖಿಸಲಾದ ಸಂಬಂಧಿತ ದಾಖಲೆಗಳನ್ನು ಪರಿಶೀಲನೆಗಾಗಿ ಸದಸ್ಯರಿಗೆ ವಿದ್ಯುನ್ಮಾನವಾಗಿ ಪ್ರವೇಶಿಸಬಹುದು. ಪ್ರವೇಶಕ್ಕಾಗಿ ವಿನಂತಿಗಳನ್ನು cs@boxandboard.in ಗೆ ನಿರ್ದೇಶಿಸಬೇಕು. ಇದರಲ್ಲಿ ಸದಸ್ಯರ ಹೆಸರು, ಫೋಲಿಯೊ ಸಂಖ್ಯೆ/ಡಿಪಿ ಐಡಿ ಮತ್ತು ಕ್ಲೈಂಟ್ ಐಡಿ, ಇ–ವೋಟಿಂಗ್ ಮೂಲಕ ಮತಗಳನ್ನು ಸ್ವೀಕರಿಸುವ ಕೊನೆಯ ದಿನಾಂಕದವರೆಗೆ. ಇದಲ್ಲದೆ, ಇ–ವೋಟಿಂಗ್ ಕಾರ್ಯವಿಧಾನದ ಮೂಲಕ ನ್ಯಾಯಯುತ ಮತ್ತು ಪಾರದರ್ಶಕ ರೀತಿಯಲ್ಲಿ ಅಂಚೆ ಮತದಾನ ಪ್ರಕ್ರಿಯೆಯನ್ನು ನಡೆಸಲು ನಿರ್ದೇಶಕರ ಮಂಡಳಿಯು ಶ್ರೀ ಶರ್ಮಾ ಮತ್ತು ಪಗಾರಿಯಾ ಅವರನ್ನು ಸ್ಕೂಟಿನೈಸರ್ ಆಗಿ ನೇಮಿಸಿದೆ. ಕಂಪನಿಯು ರಿಮೋಟ್ ಇ–ವೋಟಿಂಗ್‌ನ ಮುಕ್ತಾಯದಿಂದ 2 ಕೆಲಸದ ದಿನಗಳಲ್ಲಿ ಇ–ವೋಟಿಂಗ್ ಪ್ರಕ್ರಿಯೆಯ ಮೂಲಕ ಅಂಚೆ ಮತಪತ್ರದ ಮೂಲಕ ಮತದಾನದ ಫಲಿತಾಂಶಗಳನ್ನು ಪ್ರಕಟಿಸುತ್ತದೆ. ಈ ಫಲಿತಾಂಶಗಳು, ಸ್ಕೂಟಿನೈಸರ್‌ನ ವರದಿಯೊಂದಿಗೆ, ಕಂಪನಿಯ ವೆಬ್‌ಸೈಟ್ https://boxandboard.in/ ಮತ್ತು https://www.evotingindia.com/noticeResults.jsp CDSL ವೆಬ್‌ಸೈಟ್ ಅವರಿಗೆ ತಿಳಿಸಲಾಗುತ್ತದೆ ಕಂಪನಿಯ ಈಕ್ವಿಟಿ ಷೇರುಗಳನ್ನು ಪಟ್ಟಿ ಮಾಡಲಾದ ಸ್ಟಾಕ್ ಎಕ್ಸ್ಚೇಂಜ್‌ಗಳು, ಅವುಗಳೆಂದರೆ NSE ಮತ್ತು BSE.

ಬಿ ಆಂಡ್ ಬಿ ಟ್ರಿಪಲ್–ವಾಲ್ ಕಂಟೈನರ್ ಲಿಮಿಟೆಡ್ ಪರವಾಗಿ
ಸಹಿ/–
ಮನೀಶ್ ಕುಮಾರ್ ಗುಪ್ತಾ
ಡಿನ್ ಸಂಖ್ಯೆ: 03568502
ವ್ಯವಸ್ಥಾಪಕ ನಿರ್ದೇಶಕರು

ದಿನಾಂಕ: 09/04/2024
ಸ್ಥಳ: ಬೆಂಗಳೂರು